## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

***ಸಿ.ಸಿ. ಸಂಖ್ಯೆ : 947/2021***

*ಚಾಸಾ : 5*
*ಪ್ರಾಸಾ : 6*

| | | |
|---|---|---|
| **ಹೆಸರು** | : | ಜೋಸೆಫ್ |
| **ತಂದೆಯ ಹೆಸರು** | : | ರಾಫೆಲ್ |
| **ವಯಸ್ಸು** | : | 53 ವರ್ಷ |
| **ಉದ್ಯೋಗ** | : | ಬಿಲ್ಡಿಂಗ್ ಕಂಟ್ರಾಕ್ಟರ್ |
| **ವಾಸಸ್ಥಳ** | : | ಸಿದ್ದಾಪುರ ಗ್ರಾಮ |

**ದಿನಾಂಕ : *14-12-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸ. ಸ. ಅ. ರವರಿಂದ : -**

ಚಾಸಾ-1 ಹಾಗೂ 4 ರವರ ಪರಿಚಯವಿರುತ್ತದೆ. ದಿನಾಂಕ 13-05-2021 ರಂದು ನಾವು ಬಾಡಗ ಬಾಣಾಂಗಾಲ ಗ್ರಾಮದ ಬಿಬಿಟಿಸಿಎಲ್ ಕಂಪನಿಯ ತೋಟದ ಕೆಲಸದ ವಿಚಾರ ಮಾತನಾಡಲು ಹೋಗಿದ್ದು, ಅಲ್ಲಿ ಪೋಲಿಸರು ಈ ಪ್ರಕರಣದ ವಿಚಾರವನ್ನು ತಿಳಿಸಿದ್ದು, ನಾವು ಅದಕ್ಕೆ ಒಪ್ಪಿಕೊಂಡು ಪೋಲಿಸರು ಕರೆದುಕೊಂಡ ಹೋದ ಕೃತ್ಯ ಸ್ಥಳಕ್ಕೆ ಹೋಗಿದ್ದು ಅಲ್ಲಿ ಪೋಲಿಸರು ನನ್ನ ಹಾಗೂ ಚಾಸಾ-4 ರವರ ಸಮಕ್ಷಮ ಮಹಜರ ಬರೆದು ಸತ್ತ ದನದ ಬೋಟಿ, ಚರ್ಮವನ್ನು ಅಮಾನತ್ತುಪಡಿಸಿಕೊಂಡು ನಂತರ ಅದನ್ನು ಗುಂಡಿ ತೆಗೆದು ಹೂತಿರುತ್ತಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಪೋಲಿಸರು ಫೋಟೋ ಸಹ ತೆಗೆದಿರುತ್ತಾರೆ. ಸಾಕ್ಷಿಗೆ ನಿಪಿ*2* ನ್ನು ತೋರಿಸಲಾಗಿ, ಸಾಕ್ಷಿಯು ಅದು ಪೋಲಿಸರು ಜರುಗಿಸಿದ ಮಹಜರು ಎಂದು ಗುರುತಿಸಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ*2(ಸಿ)* ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ *3* ರಿಂದ *5* ಫೋಟೋಗಳನ್ನು ತೋರಿಸಲಾಗಿ, ಸಾಕ್ಷಿ ಅದು ಮೇಲೆ ಹೇಳಿದಂತೆ ಮಹಜರ ಬರೆದಾಗ ತೆಗೆದ ಫೋಟೋಗಳೆಂದು ಗುರುತಿಸುತ್ತಾರೆ. ನಂತರ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿರುತ್ತಾರೆ.

**ಪಾಟಿ ಸವಾಲು : ಶ್ರೀ. ಎ ಎಂ ಎಲ್ / ಕುಮಾರಿ ಎ ಪಿ ಆರ್ ಆರೋಪಿಗಳ ಪರ ವಕೀಲರಿಂದ :**

ನಾವು ಸದರಿ ಎಸ್ಟೇಟ್‌ಗೆ ಕೆಲಸದ ಸಂಬಂಧ ಮಾತನಾಡಲು ಹೋದಾಗ ಪೋಲಿರು ಬಂದು ಮಹಜರಿಗೆ ಬರುವಂತೆ ಕೇಳಿರುತ್ತಾರೆ. ನಾನು ಹಾಗೂ ಚಾಸಾ-4 ರವರು ಕೃತ್ಯ ಸ್ಥಳಕ್ಕೆ ಹೋಗಿರುತ್ತೇವೆ. ಚಾಸಾ1 ಹಾಗೂ 4 ರವರು ನನಗೆ ಪರಿಚಿತರಾಗಿದ್ದು, ಚಾಸಾ-1 ರವರು ಅವರ ದನವನ್ನು ಮಾಂಸ ಮಾಡಿ ಮಾರಾಟ ಮಾಡಿದ್ದು, ಅದನ್ನು ಆರೋಪಿಗಳ ಮೇಲೆ ಸುಳ್ಳು ಆಪಾದನೆ ಹೊರಿಸಿ ಈಗ ಸುಳ್ಳು ಚಾಸಾ-1 ರವರಿಗೆ ಸಹಾಯ ಮಾಡುವ ಸಲುವಾಗಿ ನಾನು ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ2 ಮಹಜರಿನಲ್ಲಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ, ಬದಲಾಗಿ ಪೋಲಿಸರ ಕೋರಿಕೆಯ ಮೇರೆಗೆ ಸದರಿ ಮಹಜರಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಕೃತ್ಯ ನಡೆಯಲಾಯಿತು ಹೇಳಿದ ಸ್ದಳಕ್ಕೆ ಹೋಗಿರುವುದಿಲ್ಲ ಹಾಗೂ ನನ್ನ ಸಮಕ್ಷಮ ಪೋಲಿಸರು ನಿಪಿ2 ರಂತೆ ಮಹಜರ ಕ್ರಮ ಜರುಗಿಸಿರುವುದಿಲ್ಲ, ಬದಲಾಗಿ ನಿಪಿ2 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.